# ಅದ್ದೂರಿಗಿಂತ ಕಥೆ ಕಾಡಬೇಕು

## ಹರೀಶ್ ಪ್ರಭಾತ್
### ಉದಯದ 'ಶಾಂಭವಿ' ಅಶೋಕ್

◆ **ನಿಮ್ಮ ಪರಿಚಯ ಹೇಳಿ**

ಮೂಲತಃ ರಂಗಭೂಮಿ ಕಲಾವಿದ. 'ಪ್ರಭಾತ್ ಕಲಾವಿದರು' ಸಂಸ್ಥಾಪಕರು ನಮ್ಮ ತಾತ ಗೋಪಿನಾಥ್ ದಾಸ್. ಅವರ ಮಗ ವೆಂಕಟೇಶ ಆಚಾರ್. ಅವರು ರಂಗ ಕಲಾವಿದ, ತಂತ್ರಜ್ಞ ಕೂಡ. ಅನೇಕ ನೃತ್ಯ ರೂಪಕಗಳಿಗೆ ನಿರ್ದೇಶನ ನೀಡಿದ್ದಾರೆ. ಹುಟ್ಟಿದಾಗಿನಿಂದ ರಂಗಭೂಮಿ ಪರಿಸರದಲ್ಲಿ ಬೆಳೆದವನು ನಾನು. ನಾನು ಶೈಕ್ಷಣಿಕವಾಗಿ ಅಷ್ಟು ಗಮನ ಕೊಟ್ಟಿರಲಿಲ್ಲ. ರಂಗಭೂಮಿಯಲ್ಲಿ ತೊಡಗಿದ್ದನ್ನು ನನ್ನ ತಾಯಿ ಆಕ್ಷೇಪಿಸಿ ಮೊದಲು ಶಿಕ್ಷಣ ನಂತರ ನಟನೆ ಎಂದು ಹಟಕ್ಕೆ ಬಿದ್ದರು. ಅವರ ಒತ್ತಾಸೆಯಂತೆ ಎಂಜಿನಿಯರಿಂಗ್ ಮಾಡಿದೆ. ಪದವಿ ಮುಗಿಯುತ್ತಿದ್ದಂತೆ 'ಒಲವೇ', 'ಖುಷಿ' ಮತ್ತು 'ಮೆಲ್ಲುಸಿರೇ ಸವಿಗಾನ' ಸಿನಿಮಾ ಮಾಡಿದೆ. ನಂತರವೂ ಕೆಲವು ಅವಕಾಶ ಬಂದವು. ಏಕೋ ಅವು ಆಸಕ್ತ ಅನ್ನಿಸಲಿಲ್ಲ. ಒಂದು ವರ್ಷ ಕೆಲಸ ಮಾಡಿದೆ. ಈ ಕೆಲಸ ನನಗೆ ಆಗಿಬರುವುದಿಲ್ಲ ಎಂದು ಗೊತ್ತಾಯಿತು. ಆಗ ರಾಜೀನಾಮೆ ನೀಡಿ ಪ್ರಭಾತ್ ಕೆಲಸಕ್ಕೆ ಮೀಸಲಾದೆ.

◆ **ಕಿರುತೆರೆಗೆ ಬಂದಿದ್ದು ಹೇಗೆ?**

ರಂಗಚಟುವಟಿಕೆಯ ಜೊತೆ 2004ರಿಂದ ಸೀರಿಯಲ್‌ನಲ್ಲೂ ಕೆಲಸವನ್ನು ಆರಂಭಿಸಿದೆ. 'ಸೀತೆ' ನನ್ನ ಮೊದಲ ಧಾರಾವಾಹಿ. ಅದರ ಒಂದು ವಿಶೇಷ ಏನೆಂದರೆ, ನನ್ನ ಪತ್ನಿ ದೀಪಶ್ರೀ ಕೂಡ ಪಾತ್ರ ಮಾಡಿದ್ದರು. ನಂತರ 'ಮೌನರಾಗ', 'ಕದನ', 'ಮನೆಯೊಂದು ಮೂರು ಬಾಗಿಲು', 'ಪ್ರೇರಣಾ', 'ನಮ್ಮಮ್ಮ ಶಾರದೆ', 'ಶುಭಮಂಗಳ', 'ದೀಪವೂ ನಿನ್ನದೆ' ಮಾಡಿದೆ. ಒಂದೇ ರೀತಿ ಮಾಡುತ್ತಿದ್ದೇನೆ ಎಂದು ಅನ್ನಿಸಿತು. ಹಾಗಾಗಿ ಸ್ವಲ್ಪ ಬ್ರೇಕ್ ತೆಗೆದುಕೊಂಡೆ. ನಂತರ 'ಪ್ರಭಾತ್' ರಂಗ ಚಟುವಟಿಕೆಯಲ್ಲಿ ತೊಡಗಿದೆ. ಕಳೆದ ವರ್ಷ 'ದಾಸ ಪುರಂದರ'ಕ್ಕೆ ಕರೆ ಬಂತು. ಅದು ಭಿನ್ನ ಎಂದೆನಿಸಿ ಮತ್ತೆ ಬಣ್ಣ ಹಚ್ಚಿದೆ.

◆ **ಶಾಂಭವಿಗೆ ಬಂದಿದ್ದು ಹೇಗೆ?**

ಭಿನ್ನ ಎನ್ನುವ ಕಾರಣಕ್ಕೆ ಕಥೆ ಇಷ್ಟ ಆಯಿತು. ನಾನು ಹೆಚ್ಚು ಆದರ್ಶ ಪಾತ್ರಗಳನ್ನೇ ಮಾಡಿ, ಅದಕ್ಕೇ ಬ್ರ್ಯಾಂಡ್ ಆಗಿದ್ದೆ. ಇದು ನೆಗೆಟಿವ್ ಶೇಡ್ ಇರುವಂತಹ ಪಾತ್ರ. ಇದನ್ನು ನಿರ್ವಹಿಸಲು ತುಂಬ ಕುತೂಹಲ ಇದೆ. ವ್ಯಕ್ತಿಯನ್ನು ನೋಡಿದ ತಕ್ಷಣ ವಿಲನ್ ಅನ್ನಿಸಬೇಕು ಎನ್ನುವ ಪ್ರಜ್ಞೆಯನ್ನು ಇದು ಬ್ರೇಕ್ ಮಾಡಿದೆ. ಅಂದರೆ ಸೌಮ್ಯ ಸ್ವಭಾವ ಅಥವಾ ಒಳ್ಳೆಯವರಂತೆ ಕಾಣುವವರೂ ದುಷ್ಟರಾಗಿರುತ್ತಾನೆ. ಗುಣ ಸ್ವಭಾವಕ್ಕೂ ದೇಹದ ನೋಟಕ್ಕೂ ಸಂಬಂಧ ಇಲ್ಲ ಎನ್ನುವುದನ್ನು ಈ ಪಾತ್ರ ನಿರೂಪಿಸುತ್ತದೆ. ನಾನಿಲ್ಲಿ ಗಣಿತ ಶಿಕ್ಷಕ. ಬಡತನದಿಂದ ಬಂದ ವ್ಯಕ್ತಿ. ಒಳ್ಳೆಯವನಂತೆ ನಟಿಸಿ ಒಂದು ಕುಟುಂಬಕ್ಕೆ ಮೋಸ ಮಾಡುತ್ತೇನೆ. ಅವರ ಆಸ್ತಿಯನ್ನು ಹೊಡೆಯುತ್ತೇನೆ.

◆ **ಎಲ್ಲ ಸೀರಿಯಲ್‌ಗಳಲ್ಲೂ ಏಕರೂಪತೆ ಕಾಣುತ್ತಿದೆ. ಇದು ಏಕೆ?**

ಎರಡು ದಶಕದಿಂದ ಈ ಕ್ಷೇತ್ರದಲ್ಲಿ ಇದ್ದೇನೆ. ನನಗೂ ಏಕೆ ಹೀಗೆ ಅಂತ ಪ್ರಶ್ನೆ ಕಾಡಿದೆ. ಆರಂಭದ ದಿನಗಳಿಗೆ ಹೋಲಿಸಿದರೆ ತುಂಬ ವ್ಯತ್ಯಾಸವನ್ನು ಗುರುತಿಸಬಹುದು. ತಾಂತ್ರಿಕವಾಗಿ ಈಗ ತುಂಬ ಬೆಳೆದಿದ್ದೇವೆ. ಕ್ಯಾಮೆರಾ, ಸಂಕಲನ, ಪ್ರಸಾರದಲ್ಲಿನ ಗುಣಮಟ್ಟ ತುಂಬ ಅಭಿವೃದ್ಧಿಯಾಗಿದೆ. ಸತ್ವ ಇರುವುದು ಕಂಟೆಂಟ್‌ನಲ್ಲಿ. ಆ ಲೆಕ್ಕದಲ್ಲಿ ಹೇಳುವುದಾದರೆ ತುಂಬ ಬೆಳೆಯಬೇಕು. ಇದಕ್ಕಿಂತ ಹಿಂದಿನ ಧಾರಾವಾಹಿಗಳೇ ಚಂದ ಇದ್ದವು ಎಂದು ಅನ್ನಿಸುತ್ತದೆ. ಇವತ್ತಿನ ಟ್ರೆಂಡ್‌ಗೆ ಪೂರಕವಾಗಿ ಕಥೆಯನ್ನು ಕೊಡುತ್ತಿದ್ದೇವೆ ಎಂದು ಸಹಜವಾಗಿ ಅನ್ನಿಸುತ್ತದೆ. ಇನ್ನೇನಾದರೂ ಬೇರೆ ಮಾಡಬೇಕು ಎನ್ನುವ ಚಿಂತನೆಯೂ ನಡೆದಿದೆ. ಆಗೆಲ್ಲ 'ಜನ ಇದ್ದನ್ನೇ ಬಯಸುತ್ತಾರೆ. ಹಾಗಾಗಿ ಹೊಸ ಪ್ರಯತ್ನಗಳು ವಿಫಲವಾಗುತ್ತವೆ' ಎಂಬ ನಿರ್ಣಯಕ್ಕೆ ಬಂದು ಅದನ್ನೇ ಮುಂದುವರಿಸಿದ್ದೇವೆ ಎಂದು ಅನಿಸುತ್ತದೆ. ಕಂಟೆಂಟ್ ದೃಷ್ಟಿಯಿಂದ ಒಂದಿಷ್ಟು ಬದಲಾವಣೆ ಬೇಕು. ಜನ ಬೇರೆ ಬೇರೆ ಕಂಟೆಂಟ್‌ಗೆ ತೆರೆದುಕೊಳ್ಳುತ್ತಿದ್ದಾರೆ. ಒಟಿಟಿ – ನೆಟ್‌ಫ್ಲಿಕ್ಸ್ ಇವೆ. ಭಾರತೀಯ ಸಿನಿಮಾ ಮಾತ್ರ ಅಲ್ಲದೆ ಇರಾನ್, ಕೊರಿಯಾ ದೇಶಗಳ ಸಿನಿಮಾಗಳು ಸುಲಭಕ್ಕೆ ದಕ್ಕುತ್ತಿವೆ. ಹೀಗಿರುವಾಗ ನಾವೂ ಬೇರೆಯ ರೀತಿಯಲ್ಲಿ ಮಾಡಬೇಕು.

◆ **ಸೃಜನಶೀಲ ವೀಕ್ಷಕನಾಗಿ ಎಂತಹ ಧಾರಾವಾಹಿ ಅಪೇಕ್ಷಿಸುತ್ತೀರಿ?**

ಧಾರಾವಾಹಿಗಳು ಇಂದು ಅದ್ದೂರಿಯಾಗಿ ಬರುತ್ತಿವೆ. ಸಿನಿಮಾಗಳಿಗಿಂತ ಕಡಿಮೆ ಇಲ್ಲ. ಸೀರಿಯಲ್‌ಗಳನ್ನು ತಯಾರಿಸಲು ಬೇರೆ ಬೇರೆ ಊರು ದೇಶಗಳಿಗೆ ಹೋಗುತ್ತೇವೆ. ಹೆಲಿಕಾಪ್ಟರ್ ಕೂಡ ಬಳಸುತ್ತಿದ್ದೇವೆ. ಬಹುವಿಜೃಂಭಣೆಯಿಂದ ಚಿತ್ರೀಕರಣ ಮಾಡುತ್ತಿದ್ದಾರೆ. ಕಲಾವಿದರಿಗೂ ಒಳ್ಳೆಯ ಅವಕಾಶಗಳು ಸಿಗುತ್ತಿವೆ. ಸಾಮಾಜಿಕ ಮಾಧ್ಯಮಗಳು ಚೆನ್ನಾಗಿ ಬಳಕೆಯಾಗುತ್ತಿವೆ. ಆದರೆ ಕೆಲವೊಂದು ಸೂತ್ರಗಳು ಇವೆ. ಅವುಗಳಲ್ಲಿ ಅತ್ತೆ ಸೊಸೆಗೆ ಗೋಳು ಹೊಯ್ದುಕೊಳ್ಳುವುದು. ಖಳನಾಯಕಿಯೊಬ್ಬಳು ನಾಯಕಿಗೆ ಹಿಂಸೆಯನ್ನು ಮೇಲಿಂದ ಮೇಲೆ ನೀಡುವುದು ಅಥವಾ ನಾಯಕನಿಗೆ ಹೆಂಡತಿಗಿಂತ ಅನ್ಯ ಹುಡುಗಿಯ ಪ್ರೀತಿ ಹೆಚ್ಚಾಗುವುದು... ಇಂತಹ ಸೂತ್ರದ ಹೊರಗೆ ಬರಬೇಕು.

ಮೊದಲು ನನಗೆ ಹಾಲಿವುಡ್ ಸಿನಿಮಾಗಳು ಗೊತ್ತಾಗುತ್ತಿರಲಿಲ್ಲ. ಅಲ್ಲಿನ ಹೊಸ ತಂತ್ರಗಳು ಸಿನಿಮಾ ಕಲೆ ಸೃಜನಶೀಲ ಕಲೆ ಅರ್ಥ ಆಗುತ್ತೆ. ಹೊಸ ಅಭ್ಯಾಸವನ್ನೇ ಮಾಡಿಸಿದೆ ಅದೇ ಬೇಕು ಅಂತ ಹಳೆಯದನ್ನೇ ಇನ್ನೂ ಎಷ್ಟು ಕಾಲ ಕೊಡುವುದು? ಹೊಸತನ್ನು ಕೊಡಬೇಕು. ಅದು ಮೌಲ್ಯಯುತವಾಗಿರಬೇಕು. ಸಮಾಜಕೇಂದ್ರಿತವಾಗಿ ಇರಬೇಕು. ಕಥೆಗಳು ಕಾಡುವಂತೆ ಇರಬೇಕು.

■ ರಾಘವೇಂದ್ರ ಕೆ.

